# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್‌ಸಿ. 21/2019

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀಮತಿ ಸುವರ್ಣ | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಗಂಗಾಧರ್ | **29.10.2024** |
| **ವಯಸ್ಸು** | ಃ 52 ವರ್ಷ | |
| **ವೃತ್ತಿ** | ಃ ಗೃಹಿಣಿ | **ಪ್ರಾ.ಸಾ. ಃ 16** |
| **ವಾಸಸ್ಥಳ** | ಃ ಜೆ.ಪಿ.ನಗರ | **ಚಾ.ಸಾ. ಃ 21** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಈ ಮೊದಲು ನಾನು ತಿಲಕ್ ನಗರದಲ್ಲಿ ಕ್ಲಿನಿಕ್ ನಲ್ಲಿ ಕೆಲಸ ಮಾಡುತ್ತಿದ್ದೆ. ಆ ಕ್ಲಿನಿಕ್ ಪಕ್ಕದಲ್ಲಿ ವೇದಾವತಿ ಎನ್ನುವವರು ವಾಸವಿದ್ದರು. ಆ ವೇದಾವತಿ ಇವರು ಬಡ್ಡಿ ವ್ಯವಹಾರ ಮಾಡುತ್ತಿದ್ದರು. ನನ್ನ ಗಂಡನಿಗೆ ಕಾಲಿನ ಚಿಕಿತ್ಸೆಗೆ ಹಣದ ಅವಶ್ಯಕತೆ ಇದ್ದಾಗ ನಾನು ವೇದಾವತಿ ಅವರ ಬಳಿ 25 ಸಾವಿರ ಸಾಲ ಕೇಳಿದ್ದೆ. ಆ ಕಾಲಕ್ಕೆ ವೇದಾವತಿ ಅವರು ಮಾಸಿಕ ಶೇ.10 ರಷ್ಟು ಬಡ್ಡಿ ಕೊಡುವಂತೆ ಹೇಳಿ ಭದ್ರತೆಗಾಗಿ ನನ್ನ ಎರಡು ಚೆಕ್ ಗಳನ್ನು ಪಡೆದುಕೊಂಡು 2,500/- ಗಳನ್ನು ಬಡ್ಡಿಗಾಗಿ ಹಿಡಿದುಕೊಂಡು ಉಳಿದ 22,500/- ರೂಗಳನ್ನು ಕೊಟ್ಟಿದ್ದರು. ಆ ನಂತರ ನಾನು 15 ತಿಂಗಳ ವರೆಗೆ ಶೇ.10 ರಂತೆ ಬಡ್ಡಿಯನ್ನು ಪಾವತಿಸಿದ್ದೆ. ನಂತರ ಅಸಲು ಹಣವನ್ನು ಅವರಿಗೆ ವಾಪಸ್ಸು ಕೊಟ್ಟಿದ್ದೆ. ಆ ನಂತರ ನಾನು ಚೆಕ್ ಅನ್ನು ವಾಪಸ್ಸು ಕೊಡುವಂತೆ ಕೇಳಿದಾಗ ಕೊಡುತ್ತೇನೆ ಎಂದು ಹೇಳಿದ್ದರು ಆದರೆ ನನಗೆ ಹೋಗಿ ಪಡೆಯಲು ಆಗಿರಲಿಲ್ಲ. ನಂತರ ಪೋಲೀಸರು ನನ್ನ ಚೆಕ್ ಗಳನ್ನು ವೇದಾವತಿ ಅವರ ಮನೆಯಿಂದ ಅಮಾನತ್ತು ಪಡಿಸಿಕೊಂಡಾಗ ನನ್ನನ್ನು ಪೋಲೀಸ್ ಠಾಣೆಗೆ ಕರೆಸಿ ಆ ಚೆಕ್ ಗಳನ್ನು

ತೋರಿಸಿದ್ದರು. ಆಗ ನಾನು ಚೆಕ್ ಗಳನ್ನು ನೋಡಿ ಗುರುತಿಸಿ ನನ್ನ ಹೇಳಿಕೆ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ಕಾರ್ಪೊರೇಷನ್ ಬ್ಯಾಂಕ್ ನಲ್ಲಿ ಖಾತೆ ತೆರೆಯುವಾಗ ಕೊಟ್ಟಿದ್ದ ಅರ್ಜಿಯ ಪ್ರತಿ ಇದೆ. ಸದರಿ ದಾಖಲೆಯನ್ನು ನಿ.ಪಿ-27 ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎರಡು ಚೆಕ್ ಗಳು ವೇದಾವತಿ ಅವರಿಗೆ ಕೊಟ್ಟಿದ್ದ ಚೆಕ್ ಗಳು ಇವೆ ಮತುತ ಅದರಲ್ಲಿ ನನ್ನ ಸಹಿಗಳು ಇವೆ. ಸದರಿ ಚೆಕ್ ಗಳನ್ನು ನಿ.ಪಿ-28, 29 ಮತ್ತು ಸಹಿಗಳನ್ನು ನಿ.ಪಿ-28(ಎ) ಮತ್ತು 29(ಎ) ಎಂದು ಗುರುತಿಸಿದೆ.

***<u>ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>***

***<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>***

2. ನಾನು ವೇದಾವತಿ ಅವರಿಗೆ ಪೂರ್ತಿ ಹಣವನ್ನು ವಾಪಸ್ಸು ಕೊಟ್ಟ ಬಳಿಕ ನನ್ನ ಚೆಕ್ ಅನ್ನು ವಾಪಸ್ಸು ಕೊಡುವಂತೆ ಕೇಳಿದಾಗ ಇನ್ನೂ ಎರಡು ತಿಂಗಳ ಬಡ್ಡಿಯನ್ನು ಕೊಡುವಂತೆ ಧಮ್ಕಿ ಹಾಕಿದ್ದರು ಹಾಗೂ ನನ್ನಲ್ಲಿ ಹಣವಿರಲಿಲ್ಲವಾದ ಕಾರಣ ಸುಮ್ಮನಾಗಿದ್ದೆ ಎಂದರೆ ಈಗ ನೆನಪಿಲ್ಲ. ಈ ಬಗ್ಗೆ ಒಂದು ದಿನ ಎಲ್ಲಾ ------- ಸುಮ್ಮನಾದೆವು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-30 ಎಂದು ಗುರುತಿಸಿದೆ. ಈಗ ವೇದಾವತಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರು ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು</u>**

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*